**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿಸಿ 395/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಯು ಎಸ್ ಪ್ರತಾಪ್ | ಚಾ.ಸಾ-1 |
| ತಂದೆಯ ಹೆಸರು | - | ಲೇಟ್ ಎಸ್ ಎಂ ಪಾಪಣ್ಣ | ಪ್ರಾ.ಸಾ-3 |
| ವಯಸ್ಸು | - | 63 ವರ್ಷ | |
| ಉದ್ಯೋಗ | - | ನಿವೃತ್ತ ಮ್ಯಾನೇಜರ್, ನ್ಯಾಷನಲ್ ಇನ್ಸೂರೆನ್ಸ್ ಕಂ. ಲಿ., | |
| ವಾಸಸ್ಥಳ | - | ಬೆಂಗಳೂರು | |

ದಿನಾಂಕಃ 16-01-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ನಾನು ಮಂಡ್ಯದ ಸೀನಿಯರ್ ಬ್ರ್ಯಾಂಚ್ ಮ್ಯಾನೇಜರ್ ಆಗಿ 2005 ರಿಂದ 2012 ರವರೆಗೂ ಕರ್ತವ್ಯ ನಿರ್ವಹಿಸಿದ್ದೇನೆ. ನಮಗೆ ಎಂವಿಸಿ ನಂ.176/2009 ರಲ್ಲಿ ನಮಗೆ ಮಾಹಿತಿ ಬಂದಿರುತ್ತದೆ. ಏನೆಂದರೆ, ನಾನು ಸ್ಯಾಂಟ್ರೋ ಕಾರಿನ ಸಂಖ್ಯೆ ಕೆಎ-11 ಎಂ-2829 ರಲ್ಲಿ ನಾನು ಚಾಲಕನಾಗಿರಲಿಲ್ಲ, ಆ ಸಮಯದಲ್ಲಿ ನಾನು ಹೆಚ್ ಡಿ ಕೋಟೆಯ ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಯಲ್ಲಿ ದಿನಾಂಕಃ 20.05.2009 ರಿಂದ 25.05.2009 ರವರೆಗೆ ಒಳರೋಗಿಯಾಗಿ ದಾಖಲಾಗಿದ್ದೆ ಎಂದು ಮಾಹಿತಿಯನ್ನು ಪತ್ರದ ಮುಖಾಂತರ ನಮಗೆ ತಿಳಿಸಿರುತ್ತಾರೆ. ನಂತರ ನಾವು ನಮ್ಮ ಇನ್ಸೂರೆನ್ಸ್ ಕಂಪನಿಯವರನ್ನು ಹೆಚ್ ಡಿ ಕೋಡಿ ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಗೆ ಕಳುಹಿಸಿ ಪರಿಶೀಲನೆ ಮಾಡಿಸಿರುತ್ತೇವೆ. ಆ ಸಮಯದಲ್ಲಿ ಮಹೇಶ್ ಎಂಬ ಚಾಲಕರು, ಸದರೀ ಆಸ್ಪತ್ರೆಯ ಲ್ಲಿ ಒಳರೋಗಿಯಾಗಿ ದಾಖಲಾಗಿರುತ್ತಾರೆಂಬುದು ಖಚಿತಗೊಂಡಿರುತ್ತದೆ. ನಂತರ ಆಸ್ಪತ್ರೆಯಿಂದ ಡಿಸ್ ಚಾರ್ಜ್ ? ಸಮ್ಮರಿಯನ್ನೂ ಕೂಡ ಪಡೆದಿರುತ್ತೇವೆ. ಸದರೀ ವಿಚಾರ ನಮ್ಮ ಗಮನಕ್ಕೆ ಬಂದ ನಂತರ ಮದ್ದೂರಿನ ಪೋಲೀಸ್ ಠಾಣೆಗೆ ಹೋಗಿ ಆರೋಪಿತರು, ಮೋಸ ಮಾಡಿರುವ ಬಗ್ಗೆ ದೂರನ್ನು ನೀಡಿರುತ್ತೇವೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ. 1 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 1(ಬಿ) ಎಂದು

ಗುರುತಿಸಲಾಯಿತು. ಸದರೀ ಮೋಸವನ್ನು ಎಂ ವಿ ಸಿ ಪ್ರಕರಣದ ಅರ್ಜಿದಾರಳಾದ ಆರೋಪಿ 1 ಕೆ ಆರ್ ನೇತ್ರಾವತಿ ಮಾಡಿರುತ್ತಾರೆಂಬುದು ನಮಗೆ ಗೊತ್ತಾಗಿರುತ್ತದೆ. ಸದರೀ ಎಂ ವಿ ಸಿ ಪ್ರಕರಣದಲ್ಲಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮದ್ದೂರು ರವರು ರೂ. 4,90,000/- ಮತ್ತು ಬಡ್ಡಿಯನ್ನು ನೀಡಬೇಕೆಂದು ಅವಾರ್ಡ್ ನೀಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ**

ದಿನಾಂಕಃ 21.05.2009 ರಂದು, ಈ ಪ್ರಕರಣದ ಆರೋಪಿ 1 ರವರ ಗಂಡ ಎನ್ ಹೆಚ್ ಹರೀಶ್ ಅಪಘಾತದಲ್ಲಿ ಮೃತಪಟ್ಟಿದ್ದು, ಆರೋಪಿ 1 ರಿಂದ 5 ರವರು ಕೆಎ-11 ಎಂ-2829 ಕಾರಿನ ವಿಮಾ ಪಾಲಿಸಿಯಿಂದ ಅಕ್ರಮವಾಗಿ ಹಣ ಪಡೆಯುವ ದುರಾಲೋಚನೆಯಿಂದ ದಿನಾಂಕಃ 21.05.2009 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ಮದ್ದೂರು ಪೋಲೀಸ್ ಠಾಣಾ ಸರಹದ್ದಿನ ಶಿವಪುರದಲ್ಲಿ ಆರೋಪಿ 1 ರವರ ಗಂಡ ಹರೀಶ್ ರವರಿಗೆ ಕೆಎ-11 ಎಂ-2829 ಕಾರು ಅಪಘಾತ ಮಾಡದೇ ಇದ್ದರೂ ಸಹ ಸುಳ್ಳು ಪಿರ್ಯಾದನ್ನು ನೀಡಿ, ಎಂ ವಿ ಸಿ ಪ್ರಕರಣವನ್ನು ದಾಖಲು ಮಾಡಿದ್ದರು ಎಂದರೆ ಸರಿ. ಈ ಪ್ರಕರಣದ ಎರಡನೇ ಆರೋಪಿ ಚಾ.ಸಾ. 5 ರವರ ಮುಂದೆ ಹಾಜರಾಗಿ, ಸುಳ್ಳು ಪವರ್ ಆಫ್ ಅಟಾರ್ನಿಯನ್ನು ಸೃಷ್ಟಿಸಿ, ಸದರೀ ಕೆಎ-11 ಎಂ-2829 ಕಾರನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆಂದರೆ ಸರಿ. ಆರೋಪಿತರೆಲ್ಲರೂ ಸೇರಿ ನ್ಯಾಷನಲ್ ಇನ್ಸೂರೆನ್ಸ್ ಕಂಪನಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆಂದರೆ ಸರಿ. ಕೆಎ-11 ಎಂ-2829 ಕಾರಿನ ಮಾಲೀಕರು ದಿವ್ಯಶ್ರೀ ಆಗಿರುತ್ತಾರೆಂದರೆ ಸರಿ. ಅವರು ತಮ್ಮ ಕಾರನ್ನು ದಿನಾಂಕಃ 05.03.2009 ರಂದು ಕಾರನ್ನು ಮಾರಾಟ ಮಾಡಿದ್ದರು ಎಂದರೆ ಸರಿ. ಅವರು ಮಾರಾಟ ಮಾಡುವ ತನಕ ಸದರೀ ಕಾರು ಅಪಘಾತವಾಗಿರಲಿಲ್ಲ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ 1 ರವರ ಪರವಾಗಿ ವಕೀಲರು: ಶ್ರೀ ಎನ್ ಪಿ ರವರಿಂದ</u>**

ನಿಮ್ಮ ಇನ್ಸೂರೆನ್ಸ್ ಕಂಪನಿಯಲ್ಲಿ ಕೆಎ-11 ಎಂ-2829 ಕಾರಿಗೆ ಸಂಬಂಧಿಸಿದ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ದಿನಾಂಕಃ 21.05.2009 ರಂದು ಅಪಘಾತವಾದ ಸಂದರ್ಭದಲ್ಲಿ ಸದರೀ ಕಾರು ದಿವ್ಯಶ್ರೀ ರವರ ಹೆಸರಿನಲ್ಲಿತ್ತು ಎಂದರೆ ಸರಿ. ಸಾಮಾನ್ಯವಾಗಿ, ಅಪಘಾತವಾದ ತಕ್ಷಣ ವಿಮೆದಾರರ ಕಂಪನಿಗೆ ಮಾಹಿತಿ ಹೋಗುತ್ತದೆಯೆಂದರೆ ಸರಿಯಲ್ಲ. ಅಪಘಾತದ ಬಗ್ಗೆ ದೂರನ್ನು ನೀಡಿದ ನಂತರ ಪೋಲೀಸರು ಸಂಪೂರ್ಣವಾಗಿ, ತನಿಖೆ ಮಾಡುತ್ತಾರೆಂದರೆ ಸರಿ. ತನಿಖೆ ಮುಕ್ತಾಯಗೊಂಡ ನಂತರ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸುತ್ತಾರೆಂದರೆ ಸರಿ. ಸದರೀ ದೋಷಾ ರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮದ್ದೂರಿನಲ್ಲಿ ವಿಮಾ ಪರಿಹಾರವನ್ನು ಕೋರಿ ಎಂ ವಿ ಸಿ 176/2009 ನ್ನು ದಾಖಲು ಮಾಡಿರುತ್ತಾರೆಂದರೆ ಸರಿ. ಸದರೀ ಎಂ ವಿ ಸಿ ಪ್ರಕರಣದಲ್ಲಿ ನಿಮಗೆ ನ್ಯಾಯಲಯದಿಂದ ಸಮನ್ಸ್ ಬಂದಿರುತ್ತದೆಯೆಂದರೆ ಸರಿ. ನೀವು ನ್ಯಾಯಾಲಯಕ್ಕೆ ನಿಮ್ಮ ಲಿಖಿತ ತಕರಾರು ಸಲ್ಲಿಸುವ ಮೊದಲು ಸದರೀ ಪ್ರಕರಣದ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡುತ್ತೀರಿ ಎಂದರೆ ಸರಿ. ನೀವು ಎಂ ವಿ ಸಿ 176/2009 ರಲ್ಲಿ ನೀವು ತಕರಾರು ಸಲ್ಲಿಸುವ ಮೊದಲು ಸಮಗ್ರವಾಗಿ ತನಿಖೆ ಮಾಡಿದ್ದೀರಾ ಇಲ್ಲವಾ ಎಂದರೆ ಸಾಕ್ಷಿ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇವೆಂದು ನುಡಿಯುತ್ತಾರೆ. ನೀವು ಪರಿಶೀಲನೆ ಮಾಡಿದ ನಂತರ ಹೆಚ್ ಎಂ ಮಾದೇಗೌಡ ವಕೀಲರಿಂದ ತಕರಾರು ಕೂಡ ದಾಖಲು ಮಾಡಿದ್ದೀರಿ ಎಂದರೆ ಸರಿ. ನೀವು ಸದರೀ ಎಂ ವಿ ಸಿ ಪ್ರಕರಣದಲ್ಲಿ ನಿಮ್ಮ ಕಂಪನಿಯ ವತಿಯಿಂದ ವಿಚಾರಣೆಯನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ನಂತರ ನ್ಯಾಯಾಲಯವು ಸದರೀ ಪ್ರಕರಣದಲ್ಲಿ ದಿನಾಂಕಃ 28.05.2010 ರಂದು ತೀರ್ಪನ್ನು ನೀಡಿರುತ್ತದೆಯೆಂದರೆ ಸರಿ.

ಆಗಸ್ಟ್ 2010 ರಂದು, ಕೆ ಎ-11 ಎಂ-2829 ಕಾರಿನ ಚಾಲಕರು ಅಪಘಾತವಾಗಿದೆಯೆಂದು ಹೇಳಲಾದ ದಿನ ನಾನು ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆಂದು ನಿಮಗೆ ಪತ್ರವನ್ನು ಕಳುಹಿಸಿರುತ್ತಾರೆಂದರೆ ಸರಿ. ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ

ನ್ಯಾಯಾಲಯ ಎಂ ವಿ ಸಿ ಪ್ರಕರಣದ ಸಂಖ್ಯೆ 176/2009 ರಲ್ಲಿ ತೀರ್ಪನ್ನು ನೀಡಿದ ನಂತರ ನೀವು ಹಣವನ್ನು ಬಿಡುಗಡೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಂತರ ಸಾಕ್ಷಿ ಮುಂದುವರೆದು, ಸದರೀ ಆದೇಶವನ್ನು ಪ್ರಶ್ನಿಸಿ ಮಾನ್ಯ ಹಿರಿಯ ಸಿವಿಲ್ ನ್ಯಾಯಲಯದಲ್ಲಿ ತಡೆಯಾಜ್ಞೆಯನ್ನು ತಂದಿರುತ್ತೇನೆಂದು ನುಡಿಯುತ್ತಾರೆ, ನಂತರ ಆರೋಪಿ 1 ರವರು ಜಾರಿ ಅರ್ಜಿಯನ್ನು ಸಲ್ಲಿಸಿ, ಸದರೀ ಅರ್ಜಿಯಲ್ಲಿ ನಮ್ಮ ಕಂಪನಿಯಿಂದ ಹಣವನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ಸದರೀ ಮಹೇಶ್ ರವರು ನಮಗೆ ಪತ್ರವನ್ನು ಕಳುಹಿಸಿದ ನಂತರ ನಾವು ಅದರ ಸತಾಸತ್ಯತೆಯನ್ನು ಪರಿಶೀಲನೆ ಮಾಡಿ, ಮತ್ತು ಆಸ್ಪತ್ರೆಗೆ ಹೋಗಿ ಸದರೀ ಮಹೇಶ್‌ರವರ ಡಿಸ್‌ಚಾರ್ಜ್ ಸಮ್ಮರಿಯನ್ನು ಪಡೆದು, ನಂತರ ಮದ್ದೂರು ಪೋಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರು ನೀಡಿದ್ದೇವೆಂದು ನುಡಿಯುತ್ತಾರೆ. ಹೆಚ್ ಡಿ ಕೋಟೆಗೆ ನಮ್ಮ ಕಂಪನಿಯ ಅಧಿಕಾರಿಯವರು ಪರಿಶೀಲನೆಗಾಗಿ ಹೋಗಿರುತ್ತಾರೆ, ಆದರೆ ಅವರ ಹೆಸರು ನನಗೆ ನೆನಪಾಗುತ್ತಿಲ್ಲ. ಯಾವುದೇ ಪ್ರಕರಣದಲ್ಲಿ ನಮ್ಮ ಕಂಪನಿಯ ಕಡೆಯಿಂದ ಯಾವುದೇ ಅಧಿಕಾರಿಯನ್ನು ತನಿಖಾಧಿಕಾರಿಯಾನ್ನಾಗಿ ಕಳುಹಿಸಿದರೆ, ಅದಕ್ಕೆ ಪ್ರತ್ಯೇಕವಾದ ಲೆಡ್ಜರ್ ನ್ನು ಹೊಂದಿರುತ್ತಾರೆಂದರೆ ಸರಿಯಲ್ಲ, ಆದರೆ ಅವರು ಮಾಡಿರುವ ವರದಿ ಇರುತ್ತದೆಯೆಂದು ನುಡಿಯುತ್ತಾರೆ. ನಮ್ಮ ಕಂಪನಿಯ ವತಿಯಿಂದ ಹೆಚ್ ಡಿ ಕೋಟೆ, ಮೆಮೋರಿಯಲ್ ಆಸ್ಪತ್ರೆಗೆ ಸತ್ಯನಾರಾಯಣ ಎಂಬುವರು ತನಿಖಾಧಿಕಾರಿಯವರು ಹೋಗಿದ್ದರು.

ಯಾವುದೇ ಆಸ್ಪತ್ರೆಗೆ ಪರಿಶೀಲನೆಗೆ ಹೋದಾಗ ನಿಮ್ಮ ಕಂಪನಿಯ ಅಧಿಕಾರಿಯವರು ನಾವು ತನಿಖೆಗಾಗಿ ಬಂದಿದ್ದೇವೆಂದು ಆಸ್ಪತ್ರೆಯ ಅಧಿಕಾರಿಗೆ ಮನವಿ ಪತ್ರವನ್ನು ನೀಡುತ್ತಾರೆಂದರೆ ಸರಿಯಲ್ಲ. ನಮ್ಮ ಕಂಪನಿಯ ಅಧಿಕಾರಿಯವರು ಆಸ್ಪತ್ರೆಗೆ ಮೇಲಾಧಿಕಾರಿಯವರಿಗೆ ಮನವಿಪತ್ರವನ್ನು ನೀಡಿರುವುದಿಲ್ಲ. ಸದರೀ ತನಿಖೆಯನ್ನು ನಮ್ಮ ಕಂಪನಿಯ ಅಧಿಕಾರಿಯವರಾದ ಸತ್ಯನಾರಾಯಣರವರು ಸೆಪ್ಟೆಂಬರ್ -2010 ರಲ್ಲಿ ಆಸ್ಪತ್ರೆಗೆ ಹೋಗಿ ತನಿಖೆ ಮಾಡಿರುತ್ತಾರೆ. ನಮ್ಮ ತನಿಖಾಧಿಕಾರಿಯವರಾದ ಸತ್ಯನಾರಾಯಣರವರು ಆಸ್ಪತ್ರೆಗೆ ಹೋಗಿ, ಯಾರ ಬಳಿ ತನಿಖೆ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ, ಆದರೆ ಆಸ್ಪತ್ರೆಯಿಂದ ದಾಖಲೆಯನ್ನು ತೆಗೆದುಕೊಂಡು ಬಂದಿದ್ದಾರೆಂದು ಹೇಳುತ್ತಾರೆ. ಸದರೀ

ಅಧಿಕಾರಿಯವರು ಆಸ್ಪತ್ರೆಗೆ ಹೋಗಿ ತನಿಖೆ ಮಾಡಿ, ವರದಿಯನ್ನು ತಂದಿರುತ್ತಾರೆ. ಸದರೀ ವರದಿಯನ್ನು ಪೋಲೀಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಸದರೀ ಸತ್ಯನಾರಾಯಣರವರು ಯಾವುದೇ ತನಿಖೆಯನ್ನು ಮಾಡಿಲ್ಲ ಮತ್ತು ಯಾವುದೇ ವರದಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸದರೀ ಮಹೇಶ್ ರವರು ಆರೋಪಿತರ ಮೇಲಿನ ರಾಜಕೀಯ ವೈಶಮ್ಯದಿಂದ ನಿಮಗೆ ಸುಳ್ಳು ಪತ್ರವನ್ನು ನೀಡಿದ್ದು, ಆ ಒಂದು ಆಧಾರದ ಮೇಲೆ ನೀವು ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಏನಾದರೂ ಮಾಡಿ ಆರೋಪಿತರು ನಿಮ್ಮ ಕಂಪನಿಯಿಂದ ಪಡೆದುಕೊರಾಡಿರುವ ಹಣವನ್ನು ವಾಪಸ್ಸು ಪಡೆದುಕೊಳ್ಳಲು ನೀವು ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ಮೇಲಾಧಿಕಾರಿಗಳು ತಿಳಿಸಿದ ಮೇರೆಗೆ ನೀವು ದೂರು ದಾಖಲು ಮಾಡಿದ್ದೀರಿ ಎಂದರೆ ಸಾಕ್ಷಿ ನಾನು ನಮ್ಮ ಮೇಲಾಧಿಕಾರಿಯವರ ಅನುಮತಿಯನ್ನು ಪಡೆದು, ಪ್ರಕರಣವನ್ನು ದಾಖಲು ಮಾಡಿದ್ದೇನೆಂದು ನುಡಿಯುತ್ತಾರೆ. ನಿಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಮಹೇಶ್‌ರವರು ಹೆಚ್ ಡಿ ಕೋಟೆಯ ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಯಲ್ಲಿ ದಾಖಲಾಗಿರುವ ಬಗ್ಗೆ ಡಿಸ್‌ಚಾರ್ಜ್ ಸಮ್ಮರಿಯನ್ನು ನ್ಯಾಯಾಲಯಕ್ಕೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ನೀವು ಆ ರೀತಿಯ ಯಾವುದೇ ದಾಖಲೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಅಪಘಾತವಾಗಿ, ಆ ಬಗ್ಗೆ ಪೋಲೀಸರು ಸಮಗ್ರವಾಗಿ ತನಿಖೆ ಮಾಡಿ, ದೋಷಾರೋಪಣೆ ಪಟ್ಟಿಯನ್ನು ಸಲಿಲಸಿರುತ್ತಾರೆ, ಈ ಎಲ್ಲಾ ವಿಚಾರ ನಿಮಗೆ ಗೊತ್ತಿದ್ದರೂ ಆರೋಪಿ 1 ರವರು ನಿಮ್ಮ ಕಂಪನಿಯಿಂದ ಪಡೆದುಕೊಂಡಿರುವ 4,90,000/- ಮತ್ತು ಬಡ್ಡಿಯನ್ನು ವಸೂಲು ಮಾಡುವ ಉದ್ದೇಶದಿಂದ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾಹನಕ್ಕೆ ಸಂಬಂಧಿಸಿದ ಸುಳ್ಳು ಜನರಲ್ ಪವರ್ ಆಫ್ ಅಟಾರ್ನಿಯನ್ನು ಸೃಷ್ಟಿ ಮಾಡಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅಪಘಾತ ಮಾಡುವ ಪೂರ್ವದಲ್ಲಿ ದಿವ್ಯಶ್ರೀ ರವರು ತಮ್ಮ ವಾಹನವನ್ನು ಬೇರೆಯವರಿಗೆ ಮಾರಾಟ ಮಾಡಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಿವ್ಯಶ್ರೀ ರವರು ತಮ್ಮ

ವಾಹನವನ್ನು ಮಾರಾಟ ಮಾಡಿರುವ ಬಗ್ಗೆ ದಾಖಲೆಯನ್ನು ಪೋಲೀಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ದಿವ್ಯಶ್ರೀರವರೇ ಪೋಲೀಸರಿಗೆ ದಾಖಲೆಯನ್ನು ನೀಡಿದ್ದಾರೆಂದು ನುಡಿಯುತ್ತಾರೆ. ಸದರೀ ವಾಹನವನುನ ದಿವ್ಯಶ್ರೀ ರವರು ಯಾರಿಗೆ ಮತ್ತು ಎಷ್ಟು ಮೊತ್ತಕ್ಕೆ ಮಾರಾಟ ಮಾಡಿದ್ದಾರೆಂದು ನೀವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. ನಿಮ್ಮ ಕಂಪನಿಯ ತನಿಖಾಧಿಕಾರಿಯಾದರೂ ಆ ವಿಚಾರದ ಬಗ್ಗೆ ತನಿಖೆ ಮಾಡಿದ್ದಾರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಸದರೀ ಕಾರಿನ ವಿಮಾ ಮೊತ್ತವನ್ನು ಯಾರು ಕಟ್ಟಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ದಿವ್ಯಶ್ರೀ ರವರ ಗಂಡನೇ ಪಾಲಿಸಿಯ ಹಣವನ್ನು ಪಾವತಿ ಮಾಡಿದ್ದಾರೆಂದು ನುಡಿಯುತ್ತಾರೆ. ಆದ್ದರಿಂದ ದಿವ್ಯಶ್ರೀ ರವರ ಹೆಸರಿನಲ್ಲಿ ಸದರೀ ವಾಹನದ ವಿಮಾ ಪಾಲಿಸಿ ಇದ್ದು, ಸದರೀ ವಾಹನವನ್ನು ಮಹೇಶ್ ರವರೇ ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ, ದಿವ್ಯಶ್ರೀ ಮತ್ತು ಮಹೇಶ್ ರವರ ಮಾತು ಕೇಳಿಕೊಂಡು ಆರೋಪಿತರಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಆರೋಪಿ 2 ಮತ್ತು 4 ರವರ ಪರ ವಕೀಲರು ಆರೋಪಿ 1 ರವರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡಿರುತ್ತಾರೆ, ಅದರಂತೆ ಅಳವಡಿಸಿಕೊಂಡಿರುತ್ತೇನೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ